ಹೌದು, ಉದಾಹರಣೆಗೆ ಹಿಂದಿ ಭಾಷೆಯ ಹೇರಿಕೆಯ ಪ್ರಯತ್ನಗಳು ಇಂಥ ಅಸಹನೆಗಳನ್ನು ಹುಟ್ಟಿಸಿತು.



◆ **ಈ ಸಮನ್ವಯತೆಯ ತಾತ್ವಿಕತೆಯನ್ನು ರೂಪಿಸುವಲ್ಲಿ ನಿಮ್ಮ ಪರಮಾಪ್ತ ಗೆಳೆಯರಾದ ಡಿ.ಆರ್. ನಾಗರಾಜ್ ಅವರ 'ಫ್ಲೇಮಿಂಗ್ ಫೀಟ್' ಮುಖ್ಯವಾದುದು ಅನಿಸುತ್ತೆ. ಈ ತಾತ್ವಿಕತೆಯ ರಚನೆಯ ಹೊತ್ತಿನಲ್ಲಿ ನೀವು ಅವರೊಂದಿಗೆ ಇದ್ದವರು...**

ಡಿ.ಆರ್. ಅವರ ಈ ಕೊಡುಗೆಯನ್ನು ಒಪ್ಪಿಯೂ ನಾವು ಮರೆಯಬಾರದ ಕೆಲವು ಸಂಗತಿಗಳಿವೆ. ಕನ್ನಡ ಜಗತ್ತಿನ ಪ್ರಜ್ಞೆಯಲ್ಲೇ ಇದರ ಬೀಜಗಳಿದ್ದವು. ನಮ್ಮ ಶರಣರ ವಿಚಾರಧಾರೆಯೂ ಸೇರಿದಂತೆ ಇತರ ಸಂಗತಿಗಳು, ಕನ್ನಡಿಗರು ಒಂದು ಹೆಜ್ಜೆ ಮುಂದೆ ಅನ್ನುವುದನ್ನು ಉದ್ದಕ್ಕೂ ಸಾಬೀತುಪಡಿಸುತ್ತಲೇ ಬಂದಿವೆ. ಬಂಗಾಳದ ಬಗೆಗೆ, ಕೇರಳದ ಬಗೆಗೆ ಈ ಮಾತುಗಳನ್ನು ಹೇಳುವುದುಂಟು. ಆದರೆ ಕನ್ನಡದ ವಿವೇಕದ ಬಗೆಗೆ, ಮುಂಗಾಣ್ಕೆಯ ಬಗೆಗೆ, ಬಹುತ್ವಗಳನ್ನು ಗ್ರಹಿಸಿ, ಒಪ್ಪಿ ಗೌರವಿಸುವ ಈ ಗುಣ ಮಾತ್ರ ಅಪ್ಪಟ ಕನ್ನಡದ್ದು. ಈ ವಿವೇಕದ ಬೀಜವನ್ನು ಡಿ.ಆರ್. ರಕ್ಷಿಸಿ, ಬೆಳೆಸಿ, ಪೋಷಿಸಿದರು. ಇದರ ಫಲವೇ 'ಫ್ಲೇಮಿಂಗ್ ಫೀಟ್'. ಇದನ್ನು ಡಿ.ಆರ್. ಇಂಗ್ಲಿಷಿನಲ್ಲಿ ಪ್ರಕಟಿಸಿದಾಗ ಅದಕ್ಕೆ ಮತ್ತು ಆತನಿಗೆ ದೊಡ್ಡ ಮಟ್ಟದ ಖ್ಯಾತಿ ದೊರಕಿತು. ದಿಲ್ಲಿಯಲ್ಲಿದ್ದ ಅನೇಕ ಸಮಾಜವಾದಿ ಚಿಂತಕರು ಇದಕ್ಕೆ ಅಪಾರವಾದ ಮನ್ನಣೆ ಕೊಟ್ಟರು. ಯೋಗೇಂದ್ರ ಯಾದವ್, ರಾಮಚಂದ್ರ ಗುಹಾ, ಆಶೀಶ್ ನಂದಿ ಇವರೆಲ್ಲ ಈಗಲೂ ಆಗಾಗ ಪ್ರಸ್ತಾಪ ಮಾಡುತ್ತಲೇ ಇರುತ್ತಾರೆ.

◆ **ಇದನ್ನು ಡಿ.ಆರ್. ಅವರೇ ಸೃಷ್ಟಿಸಿದ್ದು ಅನ್ನುವ ಅರ್ಥದಲ್ಲಿ ನಾನು ಹೇಳಲಿಲ್ಲ. ಆದರೆ, ಗಾಂಧಿ ಮತ್ತು ಅಂಬೇಡ್ಕರ್ ಅವರನ್ನು ಕೂಡಿಸುವ ತುರ್ತು ಇದ್ದಾಗ ಅದನ್ನು ತಾತ್ವಿಕವಾಗಿ ಪ್ರಚುರಪಡಿಸಿದರು ಅನ್ನುವ ಅರ್ಥದಲ್ಲಿ, ಅದಕ್ಕೆ ಬೇಕಾಗಿದ್ದ ಪ್ರಿಮೈಸ್ ಅನ್ನು ಕಟ್ಟುವಲ್ಲಿ ಅದೊಂದು ಪಾತ್ರ ವಹಿಸಿತು ಅನ್ನುವುದು ನನ್ನ ಅಭಿಪ್ರಾಯ ಅಂತ ಹೇಳಿದೆ. ಇದು ಕನ್ನಡದ ಮಣ್ಣಿನ ಗುಣ ಅನ್ನುವುದನ್ನು ನಾನೂ ಒಪ್ಪುತ್ತೇನೆ. ಕವಿರಾಜಮಾರ್ಗಕಾರ 'ನೆರೆಸೈರಿಸಲಾರ್ಪೊಡೆ' ಎನ್ನುವುದು ಕನ್ನಡ ವಿವೇಕದ ಮೂಲಗುಣ ಎನ್ನುವುದನ್ನು ಎಲ್ಲರೂ ಒಪ್ಪುತ್ತೇವೆ.**

ರಕ್ಷಿಸಿ, ಪೋಷಿಸಿ ಅನ್ನುವ ನನ್ನ ಮಾತಿನಲ್ಲೂ... ಇದೇ ಅರ್ಥವಿತ್ತು (ನಗು)!

◆ **'ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಮಿತ್ರ' ಎನ್ನುವ ಐತಿಹಾಸಿಕವಾದ ಹೇಳಿಕೆ ಹಾಗೂ ದಲಿತ-ಬಂಡಾಯ ಹೋರಾಟಗಳು ರೂಪುಗೊಂಡ ಪ್ರಕ್ರಿಯೆ – ನೀವು ಭಾಗೀದಾರರೂ ಆಗಿರುವುದರಿಂದ ನಿಮ್ಮ ಅನುಭವದ ಮಾತುಗಳ ಬಗೆಗೆ ಕುತೂಹಲ ಮಾತ್ರವಲ್ಲ ಅವು ತುಂಬ ಮುಖ್ಯವೂ ಆಗುತ್ತವೆ.**

ಅದರ ಸ್ವರೂಪ, ಏರಿಳಿತಗಳು, ಫಲಿತಗಳು ಈ ಎಲ್ಲವೂ ಐತಿಹಾಸಿಕವಾಗಿ ದಾಖಲಾಗಬೇಕು. ಒಂದು ಚಾರಿತ್ರಿಕ ಗಳಿಗೆಯಲ್ಲಿ ನಾವು ಕೆಲವು ಗೆಳೆಯರು ಒಂದು ತಂಡವಾಗಿ ಇದರ ಒಂದು ಭಾಗವಾಗಿಬಿಟ್ಟೆವು. ಸಿದ್ದಲಿಂಗಯ್ಯ, ಡಿ.ಆರ್., ಕರೀಗೌಡ ಬೀಚನಹಳ್ಳಿ, ಕಲ್ಲೂರು ಮೇಘರಾಜ್ ಮೊದಲಾದ ವೈಚಾರಿಕ ಸ್ನೇಹಿತರ ಒಂದು ತಂಡ ರೂಪುಗೊಂಡಿತು. ಈ ತಂಡದಲ್ಲಿ ಸಿದ್ದಲಿಂಗಯ್ಯ ಒಬ್ಬರನ್ನ ಬಿಟ್ಟರೆ ಉಳಿದ ನಾವೆಲ್ಲರೂ ಬೇರೆಬೇರೆ ಹಿನ್ನೆಲೆಗಳಿಂದ ಬಂದ ದಲಿತೇತರರು. ಡಿ.ಆರ್. ಅದನ್ನು ಚೆನ್ನಾಗಿ ಹೇಳಿದ್ದಾರೆ: ದಲಿತ ಹೋರಾಟದ 'ಸಹ ಪ್ರಯಾಣಿಕರು' ನಾವಾಗಿದ್ದೆವು. ಇದಕ್ಕೆ ರಾಜಕೀಯ, ಸಾಮಾಜಿಕ ಹೋರಾಟದ ಸ್ವರೂಪವೂ ಶಕ್ತಿಯೂ ದೊರಕಿತು. ಕನ್ನಡ ಭಾಷೆ, ಸಾಹಿತ್ಯವನ್ನು ಕುರಿತಂತೆ ಬಸವಲಿಂಗಪ್ಪನವರು ಹೇಳಿದ ಒಂದು ಹೇಳಿಕೆ ತಪ್ಪು ಕಲ್ಪನೆಗಳಿಗೆ ದಾರಿಯಾಗಿ ವಿವಾದವನ್ನು ಸೃಷ್ಟಿಸಿತು. ಅವರ ಹೇಳಿಕೆಯಲ್ಲಿ ಸತ್ಯಾಂಶವಿತ್ತು. ಕುವೆಂಪು ಅಂಥವರು ಅವರ ಹೇಳಿಕೆಯನ್ನು ಸಮರ್ಥಿಸಿದರು. ದಲಿತ ಚಳವಳಿ ಒಂದು ಸಾಮುದಾಯಿಕ ಚಳವಳಿಯಾಗಿ, ಅರಿವಿನ